ಶ್ರೀ ಆರ್. ಗುಂಡೂರಾವ್.—ಗಂಡ ಹೆಂಡರ ಜಗಳದಲ್ಲಿ ಕೂಸು ಬಡವಾದ ಹಾಗೆ.

ಶ್ರೀ ಪಿ. ರಾಮದೇವ್.—ನಮ್ಮ ರಾಜ್ಯದಿಂದ ಇತರೆ ರಾಜ್ಯಕ್ಕೆ ವಿದ್ಯುಚ್ಛಕ್ತಿಯನ್ನು ಕಡಿಮೆ ರೇಟಿಗೆ ಕೊಡುತ್ತಿದ್ದೇವೆ, ಅದನ್ನು ರಿವೈಸ್ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಬೇರೆಯವರು ಮಾಡಿದ್ದು ನಮಗೆ ಹೇಗೆ ಅಪ್ಲೈ ಆಗುತ್ತದೋ ಹಾಗೆಯೇ ನಾವು ಬೇರೆಯವರಿಗೆ ಅಪ್ಲೈ ಮಾಡುತ್ತೇವೆ. ತಾವು ಗೋವಾ ವಿಚಾರದಲ್ಲಿ ಹೇಳುತ್ತಿದ್ದೀರಿ ; ಅದನ್ನೂ ಹಾಕೊಂಡು. ರಾಜ್ಯದ ಹಿತವನ್ನು ಕಾಪಾಡುವ ದಿಶೆಯಲ್ಲಿ, ರಾಜ್ಯಕ್ಕೆ ನಷ್ಟವಾಗದಂತೆ ನೋಡಿಕೊಳ್ಳುವುದರಲ್ಲಿ ಅವರು ಇವರು ಎಂಬ ಬೇಧವಿಲ್ಲ, ಒಟ್ಟಿಗೆ ಅದನ್ನು ಮಾಡೋಣ. ಇವತ್ತು ಏನು ಫೈನಾನ್ಸ್ ಮಿನಿಸ್ಟರ್ ಒಪ್ಪಂದಪತ್ರವನ್ನು ಮಾಡಿಕೊಂಡು ಬಂದಿದ್ದಾರೆ, ಅದು ಸರಿ ಇದೆ. ಪುನಃ ಆಫೀಸರ್ಸನ್ನು ಕಳಿಸಿ ಮಾತನಾಡಿ, ಕರ್ನಾಟಕಕ್ಕೆ ಎಷ್ಟು ಕೊಡಬೇಕು ಎನ್ನುವುದನ್ನು ಏನು ಹೇಳುತ್ತಾರೋ ಅದನ್ನು ಸದನಕ್ಕೆ ತಿಳಿಸೋಣ. ಇವತ್ತು ೭೦-೮೦ ಲಕ್ಷ ರೂಪಾಯಿಗಳು ಎಂದು ಗೊತ್ತಾಗಿದೆ. ಸೆಂಟ್ರಲ್‌ಗೆ ಏನೂ ಪವರ್ ಇಲ್ಲ.

ಶ್ರೀ ಎಂ. ಪಿ. ಬಸಪ್ಪ.—ಈ ಸಮಾಧಾನವನ್ನು ಒಪ್ಪಿಕೊಳ್ಳುವುದಾದರೂ ಕೂಡ ಕೇರಳ ಮತ್ತು ಕರ್ನಾಟಕಕ್ಕೆ ಏನು ಅಗ್ರಿಮೆಂಟ್ ಆಗಿತ್ತು, ಅದರ ಬಗ್ಗೆ ಪ್ರಶ್ನೆ ಮಾಡುತ್ತಾ ಇಲ್ಲ. ಅವರು ಹೇಳಿದಂಥ ಕಂಡೀಷನ್‌ಗಳಿಗೆ ಒಪ್ಪಿಕೊಳ್ಳಲಾಗಿದೆ. ಈ ಒಂದು ಸನ್ನಿವೇಶ ಯಾರಿಂದ ಉದ್ಭವವಾಯಿತು ಅಂದರೆ ಯಾರು ಕೇರಳಕ್ಕೆ ಹಣವನ್ನು ಪಾವತಿ ಮಾಡಬೇಕಾಗಿತ್ತು ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸದೆ, ಲೆಕ್ಕಪತ್ರಗಳನ್ನು ಸರಿಯಾಗಿಟ್ಟುಕೊಳ್ಳದೆ ಇದ್ದುದರಿಂದ ಆಯಿತು. ಕರ್ನಾಟಕದಿಂದ ಇಷ್ಟು ಹಣ ಬರಬೇಕು ಎಂಬ ನೆಪವನ್ನು ಕಲ್ಪನೆ ಮಾಡಿಕೊಂಡು ನಮ್ಮ ಅಗ್ರಿಮೆಂಟನ್ನು ಮೂಲೆಗೆ ಇಟ್ಟರು. ೩ ವರ್ಷಗಳ ಕಾಲ ಕರ್ನಾಟಕಕ್ಕೆ ಬರಬೇಕಾದ ವಿದ್ಯುಚ್ಛಕ್ತಿಯನ್ನು ಕಡಿಮೆ ಮಾಡಿದರು ; ದರವನ್ನು ಜಾಸ್ತಿ ಮಾಡಿದರು. ಆದ್ದರಿಂದ ಈಗ ಏನು ಒಪ್ಪಂದ ಮಾಡಿಕೊಂಡಿದ್ದೀರಿ ಅದಕ್ಕೆ ಏನು ಸ್ಯಾಂಟಿಟಿ ಇರುತ್ತದೆ? ೭ ಕೋಟಿ ರೂಪಾಯಿ ಬಾಕಿಯಾಗುವುದಕ್ಕೆ ಯಾರು ಕಾರಣರು, ಇದರ ಜವಾಬ್ದಾರಿಯನ್ನು ಫಿಕ್ಸ್ ಮಾಡಿ, ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಆರ್. ಗುಂಡೂರಾವ್.—ನಮ್ಮ ಅಧಿಕಾರಿಗಳು ಸರಿಯಾಗಿ ನೋಡುತ್ತಿದ್ದಾರೆ, ನೋಡಿದ ಮೇಲೆ ವಿಚಾರ ಮಾಡೋಣ.

ELECTION OF DEPUTY SPEAKER

MR. SPEAKER.—Four Notices of Motions suggesting the name of Sri Bapu Rao Ananda Rao Hulsurkar for the office of the Deputy Speakership have been received. Motions will be moved in the order indicated in the list of Business. I now, call upon Sri K. Gangadhar, (Minister of State for Information and Youth Services) to move the Motion standing against his name and Sri B. N. Kenge Gowda to second the Motion.

SRI K. GANGADHAR (Minister of State for Information and Youth Services).—Sir, I beg to move.—

> "That Sri Bapu Rao Anand Rao Hulsurkar be elected Deputy Speaker of the Legislative Assembly."

ಶ್ರೀ ಬಿ. ಎನ್. ಕೆಂಗೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಶ್ರೀ ಕೆ. ಗಂಗಾಧರ್ ಅವರು ಮುಂಡಿಸಿರುವ ನಿರ್ಣಯವನ್ನು ಅನುಮೋದಿಸುತ್ತೇನೆ.

MR. SPEAKER.—Motion moved. Now, Sri V. M. Ghadi to move the Motion standing against his name and Sri V. A. Mathikatti to second it.

SRI V. M. GHADI.—Mr. Speaker Sir, I beg to move.—

"That Sri Bapu Rao Anand Rao Hulsurkar be elected Deputy Speaker of this House."

ಶ್ರೀ ವಿ. ಎ. ಮತ್ತಿಕಟ್ಟಿ.—ಶ್ರೀಯುತ ವಿ. ಎಂ. ಘಾಡಿಯವರು ಡೆಪ್ಯುಟಿ ಸ್ಪೀಕರ್ ಜಾಗಕ್ಕೆ ಶ್ರೀ ಬಾಪೂರಾವ್ ಆನಂದರಾವ್ ಹುಲ್ಸೂರ್‌ಕರ್ ಅವರನ್ನು ಚುನಾಯಿಸಲು ತಂದಂಥ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ.

MR. SPEAKER.—Motion moved.

SRI PRABHAKAR TELKAR —Mr. Speaker Sir, I beg to move.—

"That Sri Bapu Rao Anand Rao Hulsurkar be elected Deputy Speaker of the Legislative Assembly."

SRI B. E. RAMAIAH.—Sir, I second the Motion of Sri Prabhakar Telkar.

SRI VEERA SHETTY KUSHNOOR.—Sir, I beg to move.—

"That Sri Bapu Rao Anand Rao Hulsurkar be elected Deputy Speaker of the Legislative Assembly."

SRI MADANLAL —Mr. Speaker Sir, I second the Motion moved by Sri Veera Shetty Kushnoor.

MR. SPEAKER.—Motion moved. I will now put the Motion to the vote of the House. The question is :

"that Sri Bapu Rao Anand Rao Hulsurkar be elected Deputy Speaker of the Legislative Assembly."

(*The Motion was adopted and Sri Bapu Rao Anand Rao Hulsurkar was unanimously elected as Deputy Speaker.*)

MR. SPEAKER.—The Motion is adopted and Sri Bapu Rao Anand Rao Hulsurkar is elected as Deputy Speaker of this House. As the first Motion has been adopted, there is no necessity to put other Motions to the vote of the House. Now, I request Sri K. Gangadhar Gowda, Minister of State for Information and Youth Services and Sri B. N. Kenge Gowda to conduct Sri Bapu Rao Anand Rao Hulsurkar to the Deputy Speaker's Chair.

(*Sri K. Gangadhar Gowda, Minister of State for Information and Youth Services and Sri K. N. Kenge Gowda conducted Sri Bapu Rao Anand Rao Hulsurkar to the Deputy Speaker's Chair.*)

ಶ್ರೀ ಆರ್. ಗುಂಡೂರಾವ್ (ಮುಖ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಬಾಪೂರಾವ್ ಹುಲ್ಲೂರ್‌ಕರ್‌ರವರು ಈ ದಿನ ನಮ್ಮ ವಿಧಾನ ಸಭೆಯ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಆಗಿದ್ದು ಬಹಳ ಸಂತೋಷದ ವಿಷಯವಾಗಿದೆ. ಅವರು ಅಲ್ಪಸಂಖ್ಯಾತ ಕೋಮಿಗೆ ಸೇರಿದವರಾಗಿದ್ದು ಮತ್ತೆ ಬಹಳ ಹಿಂದುಳಿದ ವರ್ಗದ ಭಾಗದಿಂದ ಬಂದಿರತಕ್ಕವರು ಇವತ್ತು ಅವಿರೋಧವಾಗಿ ಉಪಾಧ್ಯಕ್ಷರಾಗಿ ಆಯ್ಕೆ ಹೊಂದಿದ್ದಾರೆ. ಅಧ್ಯಕ್ಷರ ಆಯ್ಕೆಯಾಗುವಂಥ ಸಂದರ್ಭದಲ್ಲಿ ಉಪಾಧ್ಯಕ್ಷರ ಸ್ಥಾನವನ್ನು ವಿರೋಧ ಪಕ್ಷದವರಿಗೆ ಕೊಡಬೇಕು ಎಂದು ವಿರೋಧ ಪಕ್ಷದವರು ವಾದ ಮಾಡಿದ್ದರು. ನಾನು ನಿನ್ನೆ ೨ ಗಂಟೆಗೆ ಬಂದಾಗ ವಿರೋಧ ಪಕ್ಷದ ಕಡೆಯವರು ಯಾರಾದರೂ ಉಪಾಧ್ಯಕ್ಷರ ಚುನಾವಣೆಗಾಗಿ ನಾಮಿನೇಷನ್ ಹಾಕಿದ್ದಾರೆಯೇ ಎಂದು ಕೇಳಿದ್ದಕ್ಕೆ ಯಾರೂ ಹಾಕಿಲ್ಲವೆಂದು ತಿಳಿದು ಬಂತು. ಸಾಮಾನ್ಯವಾಗಿ ಚುನಾವಣೆಯಾಗುತ್ತದೆ ಎಂದರೆ ನಮ್ಮ ಪಕ್ಷದವರು ನಾಮಿನೇಷನ್ ಫೈಲ್ ಮಾಡುತ್ತೇವೆ, ಆ ಕಡೆಯ ಪಕ್ಷದವರು ನಾಮಿನೇಷನ್ ಹಾಕಿರುತ್ತಾರೆ. ನಿಮ್ಮ ಚುನಾವಣೆಯಾಗುವಾಗಲೂ ಸಹ ಆಷ್ಟೆ. ಆತ್ತ ಕಡೆಯಿಂದ ಶ್ರೀಮಾನ್ ಕೊಡಗಿಯವರ ಹೆಸರು ಬಂದಿತ್ತು, ಆದರ ಮೇಲೆ ಚರ್ಚೆಗೆ ತೆಗೆದುಕೊಂಡೆವು. ಆದೇ ಪ್ರಕಾರವಾಗಿ ಉಪಾಧ್ಯಕ್ಷರ ಹುದ್ದೆಗೂ ಸಹ ನಾಮಿನೇಷನ್ ಬರುತ್ತದೆ, ಬಂದಾಗ ಚರ್ಚೆ ಮಾಡಿ ನೋಡೋಣವೆಂದಿದ್ದೆ, ಆದರೆ ನಾಮಿನೇಷನ್ನೇ ಬರಲಿಲ್ಲ. ಆದರೆ ಏತಕ್ಕೆ ನಾಮಿನೇಷನ್ ಹಾಕದೆ ಹಿಂದಕ್ಕೆ ತೆಗೆದುಕೊಂಡರೋ ಗೊತ್ತಾಗಲಿಲ್ಲ, ಏನಾದರೂ ಅವರಲ್ಲಿ ಒಮ್ಮತ ಬರಲಿಲ್ಲವೋ ಏನೋ, ಏತಕ್ಕೆಂದರೆ, ಆವರ ಕಡೆಯಲ್ಲಿ ೩-೪ ಪಕ್ಷಗಳಿಗೆ ಸೇರಿದ ವಿರೋಧ ಪಕ್ಷದವರು ಇದ್ದಾರೆ. ಅದು ಏನೇ ಇರಲಿ, ಇದರ ಬಗ್ಗೆ ಶ್ರೀ ಬೊಮ್ಮಾಯಿರವರಾದರೂ ಪ್ರಸ್ತಾಪ ಮಾಡುತ್ತಾರೆಂದರೆ ಅವರೂ ಮಾತನಾಡಲಿಲ್ಲ. ಆದುದರಿಂದ ಇವತ್ತು ಏನು ಉಪಾಧ್ಯಕ್ಷರ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿದೆ ಅದಕ್ಕಾಗಿ ನಾನು ವಿರೋಧ ಪಕ್ಷವನ್ನು ಅಭಿನಂದಿಸುತ್ತೇನೆ. ಅವರೆಲ್ಲಾ ಸೇರಿ ಒಮ್ಮತದಿಂದ ಆಯ್ಕೆ ಮಾಡುವಂಥ ನಿರ್ಧಾರವನ್ನು ಕೈಗೊಂಡಿದ್ದಾರೆ ಸಂತೋಷ, ಇಂಥಾ ಸ್ಥಾನಗಳು ಯಾವತ್ತೂ ಅವಿರೋಧವಾಗಿ ಆಯ್ಕೆಯಾಗಬೇಕಾದಂಥದ್ದೇ. ಮತ್ತೆ ಈ ದಿವಸ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸ್ಥಾನಗಳು ಒಂದು ಪರಿಶಿಷ್ಟ ವರ್ಗದವರಿಂದಲೂ ಮತ್ತೊಂದು ಅಲ್ಪಸಂಖ್ಯಾತರ ಕೋಮಿಗೆ ಸೇರಿರತಕ್ಕವರಿಂದಲೂ ಪ್ರತಿನಿಧಿಸುತ್ತಿರುವುದರಿಂದ ಇದು ನಿಜವಾಗಿಯೂ ಸ್ವಾಗತಾರ್ಹವಾದ ವಿಷಯವಾಗಿದೆ. ಶ್ರೀಮಾನ್ ಹುಲ್ಲೂರ್‌ಕರ್ ಅವರು ೧೯೭೮ರಲ್ಲಿ ಬಸವ ಕಲ್ಯಾಣದಿಂದ ಚುನಾಯಿತರಾಗಿ ಬಂದಿದ್ದರು. ಹಿಂದೆ ಅವರು ಕೆಲವು ಕಾಲ ಮಂತ್ರಿಗಳಾಗಿಯೂ ಸಹ ಸೇವೆ ಸಲ್ಲಿಸಿದ್ದಾರೆ. ಅವರು ತಮ್ಮ ಕ್ಷೇತ್ರದಲ್ಲಿ ಯಾವ ತರಹದ ಅಭಿವೃದ್ಧಿಯಾಗಬೇಕೋ ಅದಕ್ಕೆ ಹೆಚ್ಚಿನ ಗಮನವನ್ನು ಹರಿಸುತ್ತಿದ್ದಾರೆಯೇ ವಿನಹಃ ಬೇರೆ ಯಾವುದೇ ವಿಚಾರದಲ್ಲಿ ಭಾಗಿಗಳಾಗುತ್ತಿರಲಿಲ್ಲ. ಇದನ್ನು ನಾನು ಮಂತ್ರಿಯಾಗಿದ್ದಾಗಿನಿಂದಲೂ ಮತ್ತು ಈ ಮುಖ್ಯಮಂತ್ರಿಯಾಗಿಯೂ ನೋಡುತ್ತಿದ್ದೇನೆ. ಅವರು ಇನ್ನು ಯಾವುದೇ ಸಣ್ಣ ವಿಷಯಗಳ ಬಗ್ಗೆ ಕೈ ಹಾಕುತ್ತಿರಲಿಲ್ಲ ತಮ್ಮ ಕ್ಷೇತ್ರದ ಬಗೆ ಮಾತ್ರ ಅತ್ಯಂತ ಹೆಚ್ಚಿನ ಆಸಕ್ತಿಯಿಂದ ಕೆಲಸ ನಿರ್ವಹಿಸುತ್ತಿದ್ದರು. ಹಿಂದೆ ಮಂತ್ರಿಗಳಾಗಿದ್ದಾಗಲೂ ಸಹ ಅವರು ತಮ್ಮ ಕೆಲಸದ ಜೊತೆಗೆ ನಿರಾಡಂಬರವಾಗಿ ಬಹಳ ಸರಳ ರೀತಿಯಲ್ಲಿ ನಡೆದುಕೊಂಡು ಬಂದಿರತಕ್ಕಂಥ ವ್ಯಕ್ತಿಗಳು. ಇಂಥಾ ಸರಳ ವ್ಯಕ್ತಿಗಳು ಪುನ: ಈ ಸಾರಿಯೂ ಚುನಾವಣೆಯಲ್ಲಿ ಗೆದ್ದು ಬಂದು, ನಮ್ಮ ಪಕ್ಷದಲ್ಲಿ ನಿಷ್ಠಾವಂತರಾಗಿ ಮೊದಲಿನಿಂದಲೂ ಇದ್ದುಕೊಂಡು ಬಂದು, ಬಹಳ ಒಳ್ಳೆಯ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇವರಂ ಆರಿಸಿ ಬಂದಿರತಕ್ಕಂಥ ಕ್ಷೇತ್ರ ಬಹಳ ಹೆಸರುವಾಸಿಯಾದ ಬಸವಕಲ್ಯಾಣ ಮಂಟಪದಿಂದ ಬಂದಿರತಕ್ಕವರು ಆಗಿದ್ದಾರೆ. ಇವರು ಉಪಾಧ್ಯಕ್ಷರಾಗಿ ಕೆಲಸ ಮಾಡುವಾಗ ಅವರಿಗೆ ನಾವು ನಮ್ಮ ಪಕ್ಷದ ವತಿಯಿಂದ ಸಂಪೂರ್ಣವಾಗಿ ಬೆಂಬಲ, ಸಹಕಾರವನ್ನು ಕೊಡುತ್ತೇವೆಂದು ಹೇಳಬಯಸುತ್ತೇನೆ. ಅವರು ಈ ಸ್ಥಾನದಲ್ಲಿ ನಿಷ್ಪಕ್ಷಪಾತವಾದ ರೀತಿಯಲ್ಲಿ, ಆ ಪಕ್ಷ, ಈ ಪಕ್ಷದವರು ಎನ್ನುವ ಬೇಧಭಾವನೆ ಇಲ್ಲದೆ ಎಲ್ಲರ ವಿಶ್ವಾಸಕ್ಕೆ ಪಾತ್ರರಾಗಿ ಕೆಲಸ ಮಾಡಿಕೊಂಡು ಹೋಗುತ್ತಾರೆ ಎನ್ನುವ ಆಕಾಂಕ್ಷೆ ನನಗಿದೆ. ಅವರು ನಿರ್ವಹಿಸುವ ಈ ಕೆಲಸಕ್ಕೆ ದೇವರ ಎಲ್ಲ ರೀತಿಯ ಆಶೀರ್ವಾದವಿರಲಿ ಎಂದು ಪ್ರಾರ್ಥನೆ ಮಾಡಿಕೊಂಡು, ಅವರಿಗೆ ಒಳ್ಳೆಯದಾಗಲಿ ಎಂದು ಹಾರೈಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಅವಿರೋಧವಾಗಿ ಈ ಸಭೆಯ ಉಪಾಧ್ಯಕ್ಷರಾಗಿ ಆರಿಸಿ ಬಂದಿರುವಂಥಾ ಬಾಪೂರಾವ್ ಹುಲ್ಲೂರ್‌ಕರ್‌ರವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಆಯ್ಕೆಯಲ್ಲಿ ಎರಡು ವಿಚಾರಗಳು ಇವೆ. ಮಾನ್ಯ ಮುಖ್ಯಮಂತ್ರಿಗಳ ಪರು ಹೇಳಿದ ಹಾಗೆ ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಇವತ್ತಿನ ದಿವಸ ನಮ್ಮ ಕರ್ನಾಟಕ ರಾಜ್ಯ

ದಲ್ಲಿ ಎಷ್ಟರಮಟ್ಟಿನ ಸ್ಥಾನಮಾನಗಳನ್ನು ಕೊಟ್ಟುಕೊಂಡು ಬಂದಿದ್ದೇವೆ ಎನ್ನುವುದನ್ನು ಮಾನ್ಯ ಶ್ರೀ ಸಯನೆಕ್‌ರವರ ಗಮನಕ್ಕೂ ಸಹ ತರಬಯಸುತ್ತೇನೆ. ಕರ್ನಾಟಕದಲ್ಲಿ ಇಂಥಾ ಒಂದು ಒಳ್ಳೆಯ ಪರಂಪರೆಯಿಂದ ಇವತ್ತು ಅವರುಗಳ ಪೈಕಿ ಕೆಲವರನ್ನು ಮಂತ್ರಿಗಳನ್ನಾಗಿ ಮಾಡಿದ್ದೇವೆ ಮತ್ತೆ ಅಧ್ಯಕ್ಷರನ್ನಾಗಿ, ಉಪಾಧ್ಯಕ್ಷರನ್ನಾಗಿ ಮಾಡಿದ್ದೇವೆ. ಮೈನಾರಿಟೀಸ್ ಕಮಿಷನ್‌ರವರೂ ಕೂಡ ಕರ್ನಾಟಕ ರಾಜ್ಯದಲ್ಲಿ ಹಿಂದುಳಿದವರನ್ನು ಯಾವ ರೀತಿಯಾಗಿ ನಡೆಸಿಕೊಳ್ಳುತ್ತಿದ್ದಾರೆ ಎನ್ನುವ ಬಗ್ಗೆ ಹೇಳಿದ್ದಾರೆ. ಇನ್ನೊಂದು ಮಾತನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳವರು ಹೇಳಿದರು, ಅವರು ಬಹಳ ಚಾಣಾಕ್ಷರು ನಿನ್ನೆ ೨ ಗಂಟೆಯವರೆಗೂ ನೋಡಿದೆ ಯಾರ ನಾಮಿನೇಷನ್ ಬಂದಿರಲಿಲ್ಲ ಎನ್ನುವ ಮಾತನ್ನು ಹೇಳಿದರು. ನಮಗೆ ಗೊತ್ತಿತ್ತು, ಅವರ ಪಕ್ಷದಲ್ಲಿಯೇ ಒಮ್ಮತವಿಲ್ಲದೇ ಅಧಿಕಾರವನ್ನು ಹಂಚಿಕೊಳ್ಳುವುದಕ್ಕಾಗಿ ಉಪಾಧ್ಯಕ್ಷರ ಸ್ಥಾನವನ್ನು ವಿರೋಧಪಕ್ಷದವರಿಗೆ ಬಿಟ್ಟುಕೊಡಬಾರದು ಎನ್ನುವ ನಿರ್ಣಯವಾಗಿದ್ದು ನಮಗೆ ಗೊತ್ತಾಗಿದೆ. ಪಾಪ ಮಾನ್ಯ ಮುಖ್ಯಮಂತ್ರಿಗಳವರಿಗೆ ಕೊಡುವ ಮನಸ್ಸು ಇದ್ದರೂ ಅವರ ಪಕ್ಷದಲ್ಲಿ ಅಧಿಕಾರ ಲಾಲಸೆ ಎಷ್ಟಿದೆ ಎಂದರೆ ಸತ್ ಸಂಪ್ರದಾಯಂತೆ ಈ ಸ್ಥಾನವನ್ನು ವಿರೋಧ ಪಕ್ಷದವರಿಗೆ ಬಿಟ್ಟು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳವರಿಗೆ ಇಷ್ಟವಿದ್ದರೂ ಸಹ ಅವರ ಕೈಯನ್ನು ಕಟ್ಟಿ ಹಾಕಲಾಗಿತ್ತು. ಆದುದರಿಂದ ಅವರು ಈ ಸ್ಥಾನವನ್ನು ವಿರೋಧ ಪಕ್ಷದವರಿಗೆ ಕೊಡುವ ಪರಿಸ್ಥಿತಿಯಲ್ಲಿ ಇಲ್ಲ ಎನ್ನುವುದನ್ನು ಅರಿತುಕೊಂಡೇ ನಾವು ಸೂಚನೆ ಮಾಡಿರಲಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ನಮ್ಮ ಪಕ್ಷದಲ್ಲಿ ಸಂಪೂರ್ಣ ಅಧಿಕಾರವನ್ನು ಮಾನ್ಯ ಮುಖ್ಯಮಂತ್ರಿಗಳವರಿಗೆ ಬಿಟ್ಟುಕೊಟ್ಟಿದ್ದೇವೆ, ಅವರ ನಿರ್ಣಯಕ್ಕೆ ವಿರುದ್ಧವಾಗಿ ಯಾರೂ ಹೋಗುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಿಮ್ಮ ಪಕ್ಷದ ಆಂತರ್ ವ್ಯವಹಾರವನ್ನು ಹೇಳುವ ಅವಶ್ಯಕತೆ ಇಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳವರ ಕಷ್ಟವನ್ನು ಅರಿತುಕೊಂಡುದುದರಿಂದಲೇ ನಾವು ಅವರನ್ನು ಈ ಕಷ್ಟದಿಂದ ಪಾರು ಮಾಡಿದ್ದೇವೆ. ಆದಕ್ಕಾಗಿ ನಾವು ಸಹಕಾರ ಕೊಟ್ಟಿದ್ದೇವೆಯೇ ಹೊರತು ಇನ್ನು ಯಾವುದೇ ಭಿನ್ನಾಭಿಪ್ರಾಯ ನಮ್ಮ ವಿರೋಧ ಪಕ್ಷದಲ್ಲಿ ಇಲ್ಲ. ಮತ್ತೆ ಇವತ್ತಿನ ದಿವಸ ಒಂದು ವೇಳೆ ಉಪಾಧ್ಯಕ್ಷರ ಸ್ಥಾನವನ್ನು ಬಿಟ್ಟು ಕೊಟ್ಟಿದ್ದರೆ ಯಾರನ್ನು ಚುನಾಯಿಸಬೇಕೆಂದು ಸಹ ತೀರ್ಮಾನ ಮಾಡಿದ್ದೆವು. ಆದುದರಿಂದ ಮುಖ್ಯಮಂತ್ರಿಗಳವರನ್ನು ಇಕ್ಕಟ್ಟಿಗೆ ಇಡುವುದು ಬೇಡವೆಂದು ಒಮ್ಮತದ ತೀರ್ಮಾನ ಮಾಡಿದ್ದೇವೆ, ಮಾನ್ಯ ಶ್ರೀ ಪುಲ್ಲೂರ್‌ಕರ್‌ರವರು ಅನುಭವಿಗಳಿದ್ದಾರೆ, ಈ ಸಭೆಯ ಕಾರ್ಯಕಲಾಪಗಳನ್ನು ನಿಷ್ಪಕ್ಷಪಾತವಾಗಿ ನಡೆಸಿಕೊಂಡು ಹೋಗುತ್ತಾರೆಂದು ಆಶಿಸಿ, ಅವರಿಗೆ ನಮ್ಮ ಸಂಪೂರ್ಣವಾದ ಸಹಕಾರವನ್ನು ಕೊಡಬಯಸುತ್ತೇವೆ.

† ಶ್ರೀ ಕೆ.ಎಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈಗತಾನೇ ಈ ಸಭೆಯಲ್ಲಿ ಅವಿರೋಧವಾಗಿ ಈ ಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರತಕ್ಕ ಶ್ರೀಮಾನ್ ಬಾಪೂರಾವ್ ಆನಂದರಾವ್ ಪುಲ್ಲೂರ್‌ಕರ್ ಅವರನ್ನು ನಮ್ಮ ಪಕ್ಷದ ಪರವಾಗಿ ಬಹಳ ಸಂತೋಷದಿಂದ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮತ್ತು ಅವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆಡಿದಂತಹ ಮಾತುಗಳು ಸ್ವಲ್ಪವೂ ಅತಿಶಯೋಕ್ತಿಯಿಂದ ಕೂಡಿದವುಗಳಲ್ಲ ಹಾಗೂ ಅದು ನಿಜವಾಗಿಯೂ ಕೂಡ ಈ ಸದನದಲ್ಲಿ ಅವರ ಬಗ್ಗೆ ಇರತಕ್ಕ ಅಭಿಪ್ರಾಯದ ಪ್ರತೀಕ ಎಂದು ಹೇಳಿ, ಅದರ ಜೊತೆಗೆ ನನ್ನ ಧ್ವನಿಯನ್ನು ಕೂಡ ಸೇರಿಸಲಿಕ್ಕೆ ಬಯಸುತ್ತೇನೆ. ನಿಜವಾಗಿಯೂ ಅವರು ಶಾಸಕರಾಗಿ ಹಾಗೂ ಮಂತ್ರಿಗಳಾಗಿ ಸಾಕಷ್ಟು ಅನುಭವವನ್ನು ಪಡೆದಿದ್ದಾರೆ, ಎಲ್ಲಕ್ಕಿಂತ ಹೆಚ್ಚಾಗಿ ಅವರಲ್ಲಿ ಎದ್ದು ಕಾಣತಕ್ಕ ದೊಡ್ಡ ಗುಣ ಎಂದರೆ ಅದಕ್ಕೆ ಆಂಗ್ಲ ಭಾಷೆಯಲ್ಲಿ ಕ್ರಿಸ್ಟಲ್ ಕ್ಲಿಯರ್ ಎನ್ನುತ್ತಾರೆ. ಆ ರೀತಿಯ ಸೌಜನ್ಯ ಅವರಲ್ಲಿ ಇದೆ. ಆ ಒಂದು ಬಲದಿಂದ ಅವರು ಈ ಸಭೆಯ ಸಂಪೂರ್ಣ ವಿಶ್ವಾಸವನ್ನು ಸಂಪಾದಿಸುತ್ತಾರೆ ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಅಧಿಕಾರ ಲಾಲಸೆ ಬಗ್ಗೆ ಮಾನ್ಯ ಬೊಮ್ಮಾಯಿಯವರು ಹೇಳಿದರು, ಅದು ಇರಬಹುದು. ಅಧಿಕಾರ ಲಾಲಸೆಯಿಂದಲೇ ಆ ಸ್ಥಾನವನ್ನು ಗಳಿಸಿಕೊಳ್ಳಲು ಪ್ರಯತ್ನಿಸುತ್ತಾರೆಂದರೂ, ಅವರು ಮಾತ್ರ ಆ ಲಾಲಸೆ ಇರುವವರು ಅಲ್ಲ ಎಂಬುದನ್ನು ನಾನು ಮನಗಂಡಿದ್ದೇನೆ. ಆ ಸ್ಥಾನ ಅವರಿಗೆ ಯಾವುದೇ ಕಾರಣದಿಂದ ಲಭಿಸಿದರೂ ಕೂಡ ಯಾರೂ ಬೇಸರವನ್ನು ವ್ಯಕ್ತಪಡಿಸಿದ್ದನ್ನು ಕಾಣಿಲ್ಲ. ನಾವು ಆ ಸ್ಥಾನಕ್ಕೆ ಅವರನ್ನು ಆಯ್ಕೆ ಮಾಡಿದ್ದೇವೆ. ಆ ಆಯ್ಕೆ ಅವಿರೋಧವಾಗಿ ಆದದ್ದು ನಿಜ, ಆದರೆ ಅದು ಒಮ್ಮತದಿಂದ ಆಗಲಿಲ್ಲ. ಒಮ್ಮತದಿಂದ ಮಾಡಲಿಕ್ಕೆ ಸಾಧ್ಯವಿತ್ತು. ಮಾನ್ಯ ಮುಖ್ಯಮಂತ್ರಿಗಳು ವಿಧುಚ್ಛಕ್ತಿ ಬಿಚಾರವಾಗಿ ಮಾತನಾಡುತ್ತಾ ಒಂದು ಮಾತು ಹೇಳಿದರು, ನಾವು ಎಲ್ಲಿದ್ದರೂ

ನಿಮಗಿಂತ ಬುದ್ಧಿವಂತರು, ನಿಮಗಿಂತ ವಿನು ಕಡಿಮೆ ಇಲ್ಲ ಎಂದು, ಆದನ್ನು ಎಲ್ಲ ಸಂದರ್ಭಗಳಲ್ಲಿ ಒಪ್ಪಿ ಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಇದ್ದರೂ ಈ ವಿಷಯದಲ್ಲಿ ಮಾತ್ರ ನಮಗಿಂತ ಅವರೇ ಬುದ್ಧಿವಂತರು ಎಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ, ಈಗ ಅದಂತಹ ತೀರ್ಮಾನದ ಜವಾಬ್ದಾರಿಯನ್ನು ಬಹಳ ಜಾಣ್ಮೆಯಿಂದ ನಮ್ಮ ಹೆಗಲ ಮೇಲೆ ಕೂರಿಸಿದ್ದಾರೆ. ನಿಮ್ಮ ತೀರ್ಮಾನಗಳನ್ನೆಲ್ಲ ಹೊತ್ತು ಕೊಳ್ಳುವಷ್ಟು ನಮ್ಮ ಭುಜ ಗಟ್ಟಿ ಇಲ್ಲ. ಏನೇ ಆದರೂ ಕೂಡ ಇದು ಒಳ್ಳೆಯ ಆಯ್ಕೆಯಾಗಿದೆ. ಅವರಿಗೆ ನಮ್ಮ ಪಕ್ಷದ ಸಂಪೂರ್ಣ ಸಹಕಾರವನ್ನು ನೀಡಲು ಸಿದ್ಧರಿದ್ದೇವೆ. ಈ ಸಂದರ್ಭದಲ್ಲಿ, ಯಾವುದೇ ಕಾರಣದಿಂದ ವಿರೋಧ ಪಕ್ಷಕ್ಕೆ ಆ ಒಂದು ಸ್ಥಾನವನ್ನು ಕೊಡತಕ್ಕದ್ದು ಸಾಧ್ಯವಾಗದೆ ಇದ್ದರೂ ಕೂಡ ಇನ್ನು ಮುಂದಾದರೂ ಸಹ ಈ ಒಂದು ಸಂಪ್ರದಾಯವನ್ನು ಬದಲಾಪಣೆ ಮಾಡತಕ್ಕ ಜವಾಬ್ದಾರಿ ಈ ಸಭಾ ನಾಯಕರಾದ ಮಾನ್ಯ ಮುಖ್ಯ ಮಂತ್ರಿಗಳಿಗೆ ಇರುವುದರಿಂದ, ಅವರು ಮುಂದೆ ಇಂಥ ಅವಕಾಶಗಳು ಬರತಕ್ಕ ಸಂದರ್ಭದಲ್ಲಿ ಪ್ರಯತ್ನಿಸುತ್ತಾರೆಂದು ಆಶಿಸಿ ಮತ್ತೊಮ್ಮೆ ಮಾನ್ಯ ಬಾಪೂರಾವ್ ಆನಂದರಾವ್ ಹುಲ್ಸೂರ್‌ಕರ್‌ರವರಿಗೆ ಅಭಿನಂದನೆಗಳನ್ನು ಮತ್ತು ಶುಭಾಶಯಗಳನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

SRI B. B. SAYANAK (Belgaum) —Mr. Speaker Sir, on behalf of the Maharastra Ekikarana Samithi, I congratulate Sri Bapu Rao Anand Rao Hulsurkar on his being elected as Deputy Speaker of this House. an the year 1962, he was elected as a Member of this House on the ticket of Maharastra Ekikarana Samithi from Basava Kalyan. Anyhow, the Hon. Chief Minister Sri Gundu Rao has taken Sri Hulsurkar into his party and he was one of the loyal Members when the Congress-I party had lost its power. I had expected that Sri Hulsurkar would be given a berth in the Ministry, but, now the Hon. Chief Minister, at last, has given him a chance to serve as the Deputy Speaker of the House. Sometime back Sri Bommai said that Marthi Members are minority Members in this House. But, it is not correct. I would like to say that Marathi Members are not minority Members. Totally we are 10, including 5 M. E.S, Members.

SRI S. R. BOMMAI,—I never said like that.

SRI B. B. SAYANAK.—But, I would like to say that totally we are 10.

SRI M. C. NANAIAH.—Mr. Sayanak, would you like to become I Minister or the Deputy Speaker ?

SRI B. B. SAYANAK.— I do not want any Ministership or Deputy Speakership.

SRI B. BHASKAR SHETTY.—They may be Marathis, but they are all pure kannadigas.

SRI B. B. SAYANAK.—Sir, I do not say whether they are pure kannadigas or Maharastrians, but I say, there are totally 10 Marathi people who speak Marathi and who fought for it. Anyhow, I wish Sri Hulsurkar, a grand success as Deputy Speaker and may god bless him.

With these few words, I thank the Chair and conclude my speech.

ಶ್ರೀ ಕೆ. ರಾಮಭಟ್.—ಭಾರತೀಯ ಜನತಾ ಪಕ್ಷದ ವತಿಯಿಂದ, ಇವತ್ತಿನ ದಿವಸ ಅವಿರೋಧವಾಗಿ ವಿಧಾನ ಸಭೆಯ ಉಪಾಧ್ಯಕ್ಷರ ಸಾನಕ್ಕೆ ಆಯ್ಕೆಯಾಗಿರತಕ್ಕ ಶ್ರೀಮಾನ್ ಬಾಪೂರಾವ್ ಆನಂದ ರಾವ್ ಹುಲಸೂರ್‌ಕರ್‌ರವರನ್ನು ಸ್ವಾಗತಿಸಿ ಅಭಿನಂದಿಸುತ್ತೇನೆ.

ಶ್ರೀ ಪಂಪಾಪತಿ.—ಈಗ ತಾನೇ ನಮ್ಮ ಶಾಸನ ಸಭಾ ಉಪಾಧ್ಯಕ್ಷರಾಗಿ ಶ್ರೀಮಾನ್ ಬಾಪೂರಾವ್ ಆನಂದರಾವ್ ಹುಲಸೂರ್‌ಕರ್‌ರವರು ಅವಿರೋಧವಾಗಿ ಆಯ್ಕೆಯಾಗಿರುವುದಕ್ಕೆ ನಾನು ನಮ್ಮ ಕಮ್ಯೂನಿಸ್ಟ್ ಪಕ್ಷದ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತು ನಮ್ಮಂಥವರ ಕಡೆ ಹೆಚ್ಚು ನಿಗಾ ಇಟ್ಟು ನಾನು ಮಾತನಾಡತಕ್ಕ ಸಂದರ್ಭದಲ್ಲಿ ಸ್ವಲ್ಪ ಅವಕಾಶ ಮಾಡಿಕೊಡಬೇಕು ಎಂದು ನಾನು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ಎಸ್ ಪಾಟೀಲ್.—ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಉಪಾಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿರತಕ್ಕ ಶ್ರೀಮಾನ್ ಬಾಪೂರಾವ್ ಆನಂದರಾವ್ ಹುಲಸೂರ್‌ಕರ್‌ರವರು ಗಡಿ ಪ್ರದೇಶದಿಂದ ಬಂದಂತ ವ್ಯಕ್ತಿ. ಅವರು ಈ ಸ್ಥಾನವನ್ನು ಅಲಂಕರಿಸಿದುದಕ್ಕೆ ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ ಮತ್ತು ಮಾನ್ಯ ಮಂಖ್ಯಿ ಮಂತ್ರಿಗಳು ಈ ಒಂದು ನಿರ್ಣಯವನ್ನು ಬಹಳ ಜಾಣ್ಮೆಯಿಂದ ಮೊದಲೇ ಕೈಗೊಂಡುದಕ್ಕೆ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಹುಲಸೂರ್‌ಕರ್‌ರವರಿಗೆ ದೇವರು ಒಳ್ಳೆಯ ಭವಿಷ್ಯವನ್ನು ಮತ್ತು ಉತ್ತಮ ಆರೋಗ್ಯವನ್ನು ದಯಪಾಲಿಸಲಿ ಎಂದು ಪಾರ್ಥಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಬಾಪೂರಾವ್ ಆನಂದರಾವ್ ಹುಲಸೂರ್‌ಕರ್‌ರವರು ಇವತ್ತಿನ ದಿವಸ ಏನು ಈ ಒಂದು ಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ ಅದಕ್ಕೆ ನಾನು ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಯನಕ್‌ರವರು ಮಾತನಾಡುತ್ತಾ, ಮಾನ್ಯ ಹುಲಸೂರ್‌ಕರ್‌ರವರು ಮಹಾರಾಷ್ಟ್ರ ಏಕೀಕರಣ ಸಮಿತಿಯ ಟಿಕೆಟ್ ನಿಂದ ಆರಿಸಿ ಬಂದವರು ಎಂದು ಏನು ಹೇಳಿದರು ಅದು ಸರಿಯಲ್ಲ. ಅವರು ಇಂಡಿಪೆಂಡೆಂಟ್ ಆಗಿ ಆರಿಸಿ ಬಂದವರು ಎಂದು ಸ್ಪಷ್ಟಪಡಿಸಬಯಸುತ್ತೇನೆ,

SRI PRABHAKAR, R. TELKAR.—Sir, I congratulate Sri Bapu Rao Ananda Rao Hulsurkar on his election as the Deputy Speaker of this House. I know Sri Hulsurkar for the last 8-10 years. He is avery courteous and soft spoken man. When he is going to occupy the seat of Depnty Speakership, I think, he will have to be strong also. Because of his goodness let over hon. friends on the Opposite side, not think that they can just do whatever they please. On this occasion, I request Sri Hulsurkar to be very strong and do justice by looking at both the sides as a judge, as our Speaker is looking after now. I once again congratulate him and conclude my speech.

SRI M. C. NANAIAH.—Sir, just now Sri Telkar made some black references on the Opposition, saying that the Opposition Members should not speak whatever they wish in order to take undue advantage of the goodness of Hon. Deputy Speaker Sri Bapu Rao Hulsurkar But, rather, I should say that we are co-operating with the Chair and the Ruling side has to co-operate with the Chair as well as the opposite side.

ಷಿ-ಶಿ೦, ಪಿ. ಎಂ.

ಅಧ್ಯಕ್ಷರು.—ಸನ್ಮಾನ್ಯ ಸಭಾ ನಾಯಕರೇ, ಮಾನ್ಯ ವಿರೋಧಪಕ್ಷದ ನಾಯಕರೆ. ಸದಸ್ಯ ಮಿತ್ರರೇ, ಈ ದಿವಸ ಶ್ರೀ ಬಾಪೂರಾವ್ ಆನಂದರಾವ್ ಹುಲ್ಸೂರ್‌ಕರ್ ಅವರು ಈ ಸದನದ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಮಾನ್ಯ ಸದಸ್ಯರುಗಳಾದ ತಾವುಗಳು ಅವರ ಬಗ್ಗೆ ಏನು ಒಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತಮಾಡಿದಿರಿ ಅದಕ್ಕೆ ನನ್ನ ಧ್ವನಿಯನ್ನೂ ಸೇರಿಸುತ್ತಾ ಒಂದು ಮಾತನ್ನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ ನಾನು ಮತ್ತು ಶ್ರೀ ಬಾಪೂರಾವ್ ಹುಲ್ಸೂರ್‌ಕರ್ ಅವರು ಒಂದೇ ಕಾಲದಲ್ಲಿ ಅಂದರೆ ೧೯೭೨ ನೇ ಇಸವಿಯಲ್ಲಿ ವಿರೋಧಪಕ್ಷದ ಸಧಸ್ಯರಾಗಿ ಮೊದಲಬಾರಿಗೆ ಈ ಸದನವನ್ನು ಪ್ರವೇಶ ಮಾಡಿದೆವು. ಅಷ್ಟೇ ಅಲ್ಲ, ನನ್ನ ಮೇಲೂ ಒಂದು ಎಲೆಕ್ಷನ್ ಪಿಟಿಷನ್ ಇತ್ತು ಮತ್ತು ಇವರ ಮೇಲೂ ಒಂದು ಪಿಟಿಷನ್ ಇತ್ತು ಹೀಗಾಗಿ ಆ ದಿವಸದಿಂದ ಇವರು ನನಗೆ ಪರಿಚಯಸ್ಥರು. ಇವರು ಈ ಸದನದ ಸದಸ್ಯರಾಗಿ ಬಂದಾಗ ಅತೀ ಕಿರಿಯ ವಯಸ್ಸಿನ ಸದಸ್ಯರಾಗಿದ್ದರು, ಮಧ್ಯೆ ಒಂದು ಕಾಲ ಬಿಟ್ಟರೆ ಈ ಸದನದ ಸದಸ್ಯರಾಗಿ ಮೂರು ಸಾರಿ ಆಯ್ಕೆಯಾಗಿದ್ದಾರೆ. ಇವರು ಒಳ್ಳೆಯ ಅನುಭವವುಳ್ಳವರು ಮಾತ್ರವಲ್ಲದೆ ಸದನದ ಉಪಾಧ್ಯಕ್ಷರಾಗುವುದಕ್ಕೆ ಇರತಕ್ಕ ಎಲ್ಲ ಗುಣಗಳನ್ನೂ ಪಡೆಡಿದ್ದಾರೆಂಬ ಮಾತನ್ನು ಹೇಳುತ್ತಾ ಇವರಿಂದ ನನಗೆ ವೈಯಕ್ತಿಕವಾಗಿ ಮತ್ತು ಎಲ್ಲಾ ರೀತಿಯ ಸಹಕಾರ ದೊರೆಯುವುದಲ್ಲದೆ ಈ ಸದನಕ್ಕೂ ಕೂಡ ಅವರಿಂದ ಎಲ್ಲ ರೀತಿಯ ಸಹಕಾರ ದೊರೆಯಂತ್ತದೆ ಎಂಬ ಆಸೆ ಕೂಡ ನನಗಿದೆ. ಇಷ್ಟನ್ನು ಹೇಳುತ್ತಾ, ಶ್ರೀ ಬಾಪೂರಾವ್ ಹುಲ್ಸೂರ್‌ಕರ್ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

†SRI BAPU RAO ANAND RAO HULSURKAR.–Mr. Speaker, Sir, Hon'ble Members of this August House, I am really grateful for the sentiments and kind words expressed by you on assuming the office of the Deputy Speaker- I will try to keep up the image which has been described and I will discharge my duties to the best of my ability. I also thank our Hon'ble Chief Minister for having given me this opportunity to serve in this House in the capacity of Deputy Speaker and also thank the Hon'ble Deputy Leader of the Opposition and other friends for the kind words spoken of me and I seek co-operation of one and all in discharging my duties I thank the Hon'ble Speaker for having given me an opportunity to speak a few words on this occasion.

Announcement

ಅಧ್ಯಕ್ಷರು.—ಮುಂದಿನ ಕಾರ್ಯಕ್ರಮಕ್ಕೆ ಹೋಗುವುದಕ್ಕೆ ಮುಂಚೆ ಒಂದು ಪ್ರಕಟಣೆಯನ್ನು ಸಭೆಗೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ. ಸನ್ಮಾನ್ಯ ಸದಸ್ಯರಾದ ಶ್ರೀ ಬಿ. ಬಸವಲಿಂಗಪ್ಪನವರು ಕಾಂಗ್ರೆಸ್ (ಯು) ಪಕ್ಷಕ್ಕೆ ರಾಜೀನಾಮೆ ಕೊಟ್ಟಿದ್ದೇನೆಂದು ಪತ್ರ ಬರೆದಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಗಾದರೆ ಅವರು ಸ್ವತಂತ್ರರಾಗಿರುತ್ತಾರೆಯೇ ?

ಅಧ್ಯಕ್ಷರು.—ನನಗೆ ಬಂದಿರುವ ಪತ್ರ ಇಷ್ಟು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರಿಗೆ ಎಲ್ಲಾದರೂ ಒಂದು ಸ್ಥಾನ ಕೊಡಬೇಕಲ್ಲ. ಅಲ್ಲೂ ಇಲ್ಲ ಎಂದರೆ ಇವರ ಸ್ಥಿತಿ ತ್ರಿಶಂಕು ಆಯಿತಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಸದಕ್ಕೆ ಅವರು ಹೊರಗಡೆ ಲಾಬಿನಲ್ಲಿದ್ದಾರೆ. ಅಲ್ಲೇ ಅವರಿಗೆ ಒಳ್ಳೆ ಸ್ಥಾನ ಕೊಟ್ಟರೆ ಸಾಕು.